# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕಿರಿಯ ಪವರ್ ಮ್ಯಾನ್ (ಕಿರಿಯ ಮಾರ್ಗದಾಳು) ಹಾಗೂ ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಗಳಿಗೆ**
**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ ವಿಶೇಷ ನೇಮಕಾತಿ**

ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3590/89-90(2) ದಿನಾಂಕ: 28 MAR 2019

ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3590/89-90(2), ದಿನಾಂಕ: 26.04.2002, 24.04.2003 ಮತ್ತು 14.02.2017 ರ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಭರ್ತಿಯಾಗದೆ ಬಾಕಿ ಉಳಿದಿರುವ **ಸಹಾಯಕ ಮಾರ್ಗದಾಳು ಮತ್ತು ಸ್ಟೇಷನ್ ಪರಿಚಾರಕ ದರ್ಜೆ-2 ಹುದ್ದೆಗಳಿಗೆ** ಭರ್ತಿ ಮಾಡಲು ಅರ್ಹ **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ** 'ಆನ್‌ಲೈನ್' ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಸದರಿ ಹುದ್ದೆಗಳನ್ನು ಭರ್ತಿಮಾಡಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಶಿಫಾರಸ್ಸಿನ ಮೇರೆಗೆ ದಿನಾಂಕ: 15.12.2017 ರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3590/89-90(2) ರಲ್ಲಿ ಸದರಿ ಹುದ್ದೆಗಳನ್ನು **ಕಿರಿಯ ಪವರಮ್ಯಾನ್ (ಕಿರಿಯ ಮಾರ್ಗದಾಳು) ಮತ್ತು ಕಿರಿಯ ಸ್ಟೇಷನ್ ಪರಿಚಾರಕ** ಹುದ್ದೆಗಳನ್ನಾಗಿ ಪರಿವರ್ತಿಸಲಾಗಿರುತ್ತದೆ.

ಆದ್ದರಿಂದ, **ಕಿರಿಯ ಪವರ್‌ಮ್ಯಾನ್ (ಕಿರಿಯ ಮಾರ್ಗದಾಳು)** ಹಾಗು **ಕಿರಿಯ ಸ್ಟೇಷನ್ ಪರಿಚಾರಕ** ಹುದ್ದೆಗಳನ್ನು ಭರ್ತಿಮಾಡಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅರ್ಹ ಅಭ್ಯರ್ಥಿಗಳಿಂದ ಮಾತ್ರ 'ಆನ್-ಲೈನ್' ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಹುದ್ದೆಗಳ ವರ್ಗೀಕರಣ:**

| ಕ್ರ. ಸಂ. | ಹುದ್ದೆಯ ಹೆಸರು | ವರ್ಗ | ಸಾಮಾನ್ಯ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಒಟ್ಟು |
|---|---|---|---|---|---|---|---|---|
| 1. | ಕಿರಿಯ ಪವರಮ್ಯಾನ್ (ಕಿರಿಯ ಮಾರ್ಗದಾಳು) | ಪ.ಜಾ | 1 | 3 | 1 | - | - | 5 |
| | | ಪ.ವ. | 11 | 4 | 2 | 1 | 1 | 19 |
| 2 | ಕಿರಿಯ ಸ್ಟೇಷನ್ ಪರಿಚಾರಕ | ಪ.ಜಾ | 1 | - | 1 | - | - | 2 |
| | | ಪ.ವ. | 1 | - | - | - | - | 1 |
| | | ಒಟ್ಟು | 14 | 7 | 4 | 1 | 1 | 27 |

**ಟಿಪ್ಪಣಿ:**

ಆಯ್ಕೆಯಾದ ಅಭ್ಯರ್ಥಿಗಳನ್ನು ರಾಜ್ಯಾದ್ಯಂತ ಕವಿಪ್ರನಿನಿಯ ಯಾವುದೇ ಕಚೇರಿಗೆ ಸ್ಥಳ ನಿಯುಕ್ತಿಗೊಳಿಸಲಾಗುವುದು.

## 1. ಕ್ರೋಢೀಕೃತ ಸಂಭಾವನೆ:

ಅ) ಕ್ರೋಢೀಕೃತ ಸಂಭಾವನೆ (ಮೊದಲ 3 ವರ್ಷಗಳು):

1ನೇ ವರ್ಷ : ₹10,000/- ಮಾಸಿಕ
2ನೇ ವರ್ಷ : ₹11,000/- ಮಾಸಿಕ
3ನೇ ವರ್ಷ : ₹12,000/- ಮಾಸಿಕ

ಆ) ಆಯ್ಕೆಯಾದ ಅಭ್ಯರ್ಥಿಗಳನ್ನು ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳು ಹಾಗೂ ಸಂಬಂಧಪಟ್ಟ ಕಂಪನಿಗಳ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳ ಅಧ್ಯಾಯ-1 ರ 6(1)(ಇ) ರಂತೆ ಕೆಲವು ಷರತ್ತುಗಳಿಗೊಳಪಟ್ಟು ಮೂರು (3) ವರ್ಷಗಳ ತರಬೇತಿಗೆ ಒಳಪಡಿಸಲಾಗುವುದು. ತರಬೇತಿಯ ಅವಧಿಯಲ್ಲಿ ಯಾವುದೇ ಇನ್ನಿತರೆ ಭತ್ಯೆ ಹಾಗೂ ಸೌಲಭ್ಯಗಳನ್ನು ನೀಡಲಾಗುವುದಿಲ್ಲ.

ಇ) ಮೂರು ವರ್ಷದ ತರಬೇತಿಯನ್ನು ತೃಪ್ತಿಕರವಾಗಿ ಪೂರೈಸಿದ ನಂತರ ಅಭ್ಯರ್ಥಿಗಳನ್ನು ವೇತನ ಶ್ರೇಣಿ ₹16370-340-18070-430-20220-540-22920-670-26270-810-35180 ರಲ್ಲಿ ಎರಡು (2) ವರ್ಷಗಳ ಕಾಲ ಪರೀಕ್ಷಾರ್ಥ ಅವಧಿಯಲ್ಲಿ ಇರಿಸಲಾಗುವುದು.

## 2. ಅಗತ್ಯ ವಿದ್ಯಾರ್ಹತೆ:

ಎಸ್.ಎಸ್.ಎಲ್.ಸಿ. ಅಥವಾ 10ನೇ ತರಗತಿಯ ಪರೀಕ್ಷೆಯನ್ನು ಕರ್ನಾಟಕ ರಾಜ್ಯದ ವಿದ್ಯಾಸಂಸ್ಥೆಗಳಿಂದ ತೇರ್ಗಡೆ ಹೊಂದಿರಬೇಕು.

**ಸೂಚನೆ:**

i) **ಮೇಲೆ ತಿಳಿಸಲಾದ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೆ ಯಾವುದೇ ಸಮನಾಂತರ ವಿದ್ಯಾರ್ಹತೆಯನ್ನು (Equivalent Qualification) ಪರಿಗಣಿಸಲಾಗುವುದಿಲ್ಲ.**

ii) **ಬಾಹ್ಯ ಅಥವಾ ಮುಕ್ತ ವಿಶ್ವವಿದ್ಯಾಲಯ ಅಥವಾ ಮುಕ್ತ ಶಾಲೆಯಿಂದ ಪಡೆದ ಎಸ್.ಎಸ್.ಎಲ್.ಸಿ / 10ನೇ ತರಗತಿ (ಬ್ರಿಡ್ಜ್ ಕೋರ್ಸ್) ಉತ್ತೀರ್ಣತೆಯನ್ನು ಪರಿಗಣಿಸಲಾಗುವುದಿಲ್ಲ.**

**ಇತರೆ ಅರ್ಹತೆಗಳು:**

i) ಕನ್ನಡದಲ್ಲಿ ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು.

ii) ತೃಪ್ತಿಕರ ನೇತ್ರದೃಷ್ಟಿಯನ್ನು ಹೊಂದಿರಬೇಕು.

iii) ತೃಪ್ತಿಕರ ದೇಹದಾರ್ಢ್ಯವನ್ನು ಹೊಂದಿರಬೇಕು. ಕಠಿಣ ಕೆಲಸಗಳಾದ ಗುಂಡಿ ತೆಗೆಯುವುದು, ಗೋಪುರ ಅಥವಾ ಕಂಬ ಹತ್ತುವುದು, ಭಾರವಾದ ವಸ್ತುಗಳನ್ನು ಸಾಗಿಸುವುದು, ತಂತಿಗಳನ್ನು ಹಾಕುವುದು, ಕಂಬಗಳನ್ನು ಬದಲಾಯಿಸುವುದು, ಇತ್ಯಾದಿ ಕೆಲಸಕಾರ್ಯಗಳನ್ನು ನಿರ್ವಹಿಸಲು ತಯಾರಿರಬೇಕು ಮತ್ತು ಸಹನ ಶಕ್ತಿ ಪರೀಕ್ಷೆಯಲ್ಲಿ ಅರ್ಹತೆ ಗಳಿಸಬೇಕು.

## 3. ಅರ್ಹತೆ:

ಅರ್ಹತಾದಾಯಕ ಪರೀಕ್ಷೆಯಾದ **ಎಸ್.ಎಸ್.ಎಲ್.ಸಿ. ಅಥವಾ 10ನೇ ತರಗತಿಯಲ್ಲಿ ಕನಿಷ್ಟ ತೇರ್ಗಡೆ** ಅಂಕಗಳನ್ನು ಪಡೆದಿರುವಂತಹ ಅಭ್ಯರ್ಥಿಗಳು ಮೇಲೆ ತಿಳಿಸಿರುವ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ.

## 4. ಆಯ್ಕೆ:

'ಸಹನ ಶಕ್ತಿ ಪರೀಕ್ಷೆ'ಯಲ್ಲಿ ಅರ್ಹತೆ ಹೊಂದಿದಲ್ಲಿ, ಎಸ್.ಎಸ್.ಎಲ್.ಸಿ ಅಥವಾ 10ನೇ ತರಗತಿಯ ಪರೀಕ್ಷೆಯ ವಿದ್ಯಾರ್ಹತೆಯಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳ ಶ್ರೇಷ್ಠತೆ ಆಧಾರದ ಮೇಲೆ ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ನು ಪಾಲಿಸಿ ಆಯ್ಕೆ ಮಾಡಲಾಗುವುದು.

ಸಹನ ಶಕ್ತಿ ಪರೀಕ್ಷೆಗೆ ಈ ಕೆಳಗಿನ ಸ್ಪರ್ಧೆಗಳನ್ನು ನಿಗದಿಪಡಿಸಲಾಗಿದೆ.

| | | | |
|---|---|---|---|
| ಅ) | 100 ಮೀಟರ್ ಓಟ | : | 14 ಸೆಕೆಂಡ್‌ಗಳು |
| ಆ) | ಸ್ಕಿಪ್ಪಿಂಗ್ | : | ಒಂದು ನಿಮಿಷಕ್ಕೆ 50 ಬಾರಿ |
| ಇ) | ಶಾಟ್‌ಪುಟ್ (12 ಪೌಂಡ್‌ಗಳು) | : | 8 ಮೀಟರ್ ಎಸೆತ (3 ಅವಕಾಶಗಳು) |
| **ಈ)** | **ವಿದ್ಯುತ್ ಕಂಬ ಹತ್ತುವುದು** | **:** | **8 ಮೀಟರ್ ಎತ್ತರ (ಕಡ್ಡಾಯ)** |
| ಉ) | 800 ಮೀಟರ್ ಓಟ | : | 3 ನಿಮಿಷಗಳು |

**ನಿಗದಿಪಡಿಸಿರುವ ಅವಶ್ಯಕ ವಿದ್ಯಾರ್ಹತೆ/ಅರ್ಹತೆಗಳನ್ನು ಹೊಂದಿರದ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಾರದು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊರತುಪಡಿಸಿ, ಅರ್ಹತಾ ಪಟ್ಟಿಗಳನ್ನು ಸಿದ್ಧಪಡಿಸುವಾಗ ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.**

ಟಿಪ್ಪಣಿ:

i) ಸಹನ ಶಕ್ತಿಯ ಪರೀಕ್ಷೆಯ ಸ್ಪರ್ಧೆಗಳಿಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಅಭ್ಯರ್ಥಿಗಳು ಆಯ್ಕೆಗೆ ಅರ್ಹರಾಗಲು ಕಡ್ಡಾಯವಾಗಿ ವಿದ್ಯುತ್ ಕಂಬವನ್ನು ಹತ್ತುವುದು (ಸ್ಪರ್ಧೆ ಸಂಖ್ಯೆ: ಈ) ಮತ್ತು ಇನ್ನುಳಿದ ಸ್ಪರ್ಧೆಗಳಲ್ಲಿ ಕನಿಷ್ಟ ಎರಡು ಸ್ಪರ್ಧೆಗಳಲ್ಲಿ ಅರ್ಹತೆಯನ್ನು ಹೊಂದಿರಬೇಕಿರುತ್ತದೆ.

ಸೂಚನೆ: ಕಂಬ ಹತ್ತುವ ಸ್ಪರ್ಧೆಗೆ ಬೇಕಾಗಿರುವ ಎಲ್ಲಾ ರೀತಿಯ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳಲಾಗಿರುತ್ತದೆ. ಆದಾಗ್ಯೂ ಅಭ್ಯರ್ಥಿಗಳು ತಮ್ಮ ಸ್ವಂತ ಹೊಣೆಯಿಂದಲೇ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದರಿಂದ ಯಾವುದಾದರೂ ಅವಘಡಗಳು ಸಂಭವಿಸಿದಲ್ಲಿ, ಅಭ್ಯರ್ಥಿಗಳ ವೈದ್ಯಕೀಯ ವೆಚ್ಚವನ್ನು ನಿಗಮ/ಕಂಪನಿಯಿಂದ ಭರಿಸಲಾಗುವುದಿಲ್ಲ.

ii) ಸಹನ ಶಕ್ತಿ ಪರೀಕ್ಷೆಯ ಸಮಯದಲ್ಲಿ ಅಭ್ಯರ್ಥಿಗಳು ಸರ್ಕಾರಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ನೀಡಲಾಗುವ ಶಾರೀರಿಕ ದಾರ್ಢ್ಯತೆ ಸಂಬಂಧ ವೈದ್ಯಕೀಯ ಅರ್ಹತಾ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

iii) ಸಹನ ಶಕ್ತಿ ಪರೀಕ್ಷೆಗೆ ಅಭ್ಯರ್ಥಿಗಳನ್ನು ಎಸ್.ಎಸ್.ಎಲ್.ಸಿ / 10ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಅರ್ಹತೆಯ ಆಧಾರದಲ್ಲಿ 1:5 ರ ಅನುಪಾತದಲ್ಲಿ ಕರೆಯಲಾಗುವುದು.

iv) ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ದಾಖಲಾತಿಗಳ ಪರಿಶೀಲನೆಯನ್ನು ಸಹನ ಶಕ್ತಿ ಪರೀಕ್ಷೆಯ ಸಂದರ್ಭದಲ್ಲಿ ಮಾಡಲಾಗುವುದು. ಸಹನ ಶಕ್ತಿ ಪರೀಕ್ಷೆಯ ಸಮಯಕ್ಕೆ ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳ 'ಸ್ವಯಂ ದೃಢೀಕೃತ ಪ್ರತಿ'ಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. ಅಭ್ಯರ್ಥಿಯು ಮೂಲ ದಾಖಲಾತಿಗಳನ್ನು ಪರಿಶೀಲನೆಯ ಸಮಯದಲ್ಲಿ ಸಲ್ಲಿಸದಿದ್ದಲ್ಲಿ, ಸಹನ ಶಕ್ತಿ ಪರೀಕ್ಷೆಗೆ ಭಾಗವಹಿಸಲು ಅವಕಾಶವನ್ನು ನೀಡುವುದಿಲ್ಲ.

## 5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೀಸಲಾತಿ ಪ್ರಮಾಣ ಪತ್ರ:

ಅಭ್ಯರ್ಥಿಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮೀಸಲಾತಿಗೆ ಹಾಗೂ ಸಮತಲ ಮೀಸಲಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಆದೇಶಗಳಲ್ಲಿನ ಮಾನದಂಡವನ್ನು ತಿಳಿದಿರತಕ್ಕದ್ದು. ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ **'ನಮೂನೆ-ಡಿ'** ಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

## 6. ಗ್ರಾಮೀಣ ಅಭ್ಯರ್ಥಿಗಳಿಗಾಗಿ ಮೀಸಲಾತಿ:

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 08 ಸೇನೆನಿ 2001, ದಿನಾಂಕ: 13.02.2001 ರ ಅನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2 ರಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ದಾಖಲಾತಿ ಪರಿಶೀಲನಾ ಸಂದರ್ಭದಲ್ಲಿ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು (ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ).

## 7. ಮಾಜಿ ಸೈನಿಕರಿಗಾಗಿ ಮೀಸಲಾತಿ:

ಮಾಜಿ ಸೈನಿಕರು ಸೇನೆಯಲ್ಲಿ ಸೇವೆ ಸಲ್ಲಿಸಿರುವ ಪುರಾವೆ ಬಗ್ಗೆ ಸೇನೆಯಿಂದ ಬಿಡುಗಡೆ ಹೊಂದಿದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

## 8. ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿಗಳಿಗಾಗಿ ಮೀಸಲಾತಿ:

ಯೋಜನೆಗಳಿಂದ ನಿರಾಶ್ರಿತರಾದವರಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಯೋಜನೆಗಳಿಗಾಗಿ ಮನೆ/ಜಮೀನು ಕಳೆದುಕೊಂಡಿರುವ ಬಗ್ಗೆ ಸಂಬಂಧಪಟ್ಟ ಸ್ವಾಧೀನಾಧಿಕಾರಿಗಳಿಂದ ನಿಗದಿತ ನಮೂನೆಯಲ್ಲಿ ನೀಡಲ್ಪಟ್ಟ ಪ್ರಮಾಣ ಪತ್ರಗಳನ್ನು ಒದಗಿಸತಕ್ಕದ್ದು.

## 9. ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗಾಗಿ ಮೀಸಲಾತಿ:

ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಆಸುಇ 71 ಸೆನೆನಿ 2001, ದಿನಾಂಕ: 24.01.2002 ರ ಅನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ದಾಖಲಾತಿ ಪರಿಶೀಲನಾ ಸಂದರ್ಭದಲ್ಲಿ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

## 10. ವಯೋಮಿತಿ:

i) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಕನಿಷ್ಟ 18 ವರ್ಷದವರಾಗಿರಬೇಕು ಹಾಗೂ ಗರಿಷ್ಟ 40 ವರ್ಷ ಮೀರಿರಬಾರದು.

ii) **ಈ ವಿಶೇಷ ನೇಮಕಾತಿಯಲ್ಲಿ 29 ವರ್ಷ ಮೀರಿದ ಹಾಗೂ 40 ವರ್ಷದ ಒಳಗಿನ ಅಭ್ಯರ್ಥಿಗಳಿಗೆ ಆಯ್ಕೆಯಲ್ಲಿ ಆದ್ಯತೆ ನೀಡಲಾಗುವುದು. 29 ವರ್ಷ ಮೀರಿದ ಹಾಗೂ 40 ವರ್ಷದ ಒಳಗಿನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಕೊರತೆಯಿರುವ ಹುದ್ದೆಗಳಿಗೆ ಮಾತ್ರ 18 ವರ್ಷ ಮೀರಿದ ಹಾಗೂ 29 ವರ್ಷದ ಒಳಗಿನ ಅಭ್ಯರ್ಥಿಗಳನ್ನು ಆಯ್ಕೆಗಾಗಿ ಪರಿಗಣಿಸಲಾಗುವುದು.**

iii) ಮಾಜಿ ಯೋಧರಿಗೆ ಅವರು ಸಶಸ್ತ್ರ ಪಡೆಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಮೂರು ವರ್ಷಗಳನ್ನು ಸೇರಿಸಿ ಗರಿಷ್ಟ 45 ವರ್ಷಗಳವರೆಗೆ ಗರಿಷ್ಟ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡಲಾಗುವುದು.

## 11. ಅರ್ಜಿ ಶುಲ್ಕ:

❖ **ಕಿರಿಯ ಪವರ್‌ಮ್ಯಾನ್ (ಕಿರಿಯ ಮಾರ್ಗದಾಳು)** ಹಾಗೂ **ಕಿರಿಯ ಸ್ಟೇಷನ್ ಪರಿಚಾರಕ** ಎರಡೂ ಹುದ್ದೆಗಳಿಗೆ ಅರ್ಜಿ ಶುಲ್ಕ **ರೂ.200/-** (ರೂಪಾಯಿ ಎರಡು ನೂರು ಮಾತ್ರ)

❖ ಮೇಲಿನ ಯಾವುದಾದರೂ **ಒಂದು ಹುದ್ದೆಗೆ** ಅರ್ಜಿ ಶುಲ್ಕ **ರೂ.100/-** (ರೂಪಾಯಿ ಒಂದು ನೂರು ಮಾತ್ರ)

**ಸೂಚನೆ:** ನಗದು ಪಾವತಿ ಅಥವಾ ಮನಿ ಆರ್ಡರ್ ಅಥವಾ ಟ್ರೆಜ಼ರಿ ಚಲನ್‌ಗಳು ಅಥವಾ ಚೆಕ್ಕುಗಳು/ಡಿಮ್ಯಾಂಡ್ ಡ್ರಾಫ್ಟ್ ಅಥವಾ ಕೋರ್ಟ್ ಫೀ ಸ್ಟಾಂಪ್ಸ್ ರೆವಿನ್ಯೂ ಅಥವಾ ಪೋಸ್ಟಲ್ ಸ್ಟ್ಯಾಂಪ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

## 12. ಅರ್ಜಿ ಸಲ್ಲಿಸುವಿಕೆ:

i) ಅಭ್ಯರ್ಥಿಗಳು ಅರ್ಜಿಯನ್ನು ಕಡ್ಡಾಯವಾಗಿ ಕವಿಪ್ರನಿನಿ ವೆಬ್‌ಸೈಟ್ **www.kptcl.com** ಅನ್ನು ಲಾಗ್-ಆನ್ ಮಾಡುವುದರೊಂದಿಗೆ 'ಆನ್-ಲೈನ್' ಮೂಲಕ ಸಲ್ಲಿಸಬೇಕು. ಇತರೇ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ii) ಅಭ್ಯರ್ಥಿಗಳು ಅರ್ಜಿಯನ್ನು 'ಆನ್‌ಲೈನ್' ಮುಖಾಂತರ **ದಿನಾಂಕ: 28.03.2019** ರಿಂದ **ದಿನಾಂಕ: 28.04.2019** ರ ಸಂಜೆ 5:00 ಗಂಟೆಯವರೆಗೂ ಸಲ್ಲಿಸಬಹುದಾಗಿರುತ್ತದೆ.

iii) ಅಭ್ಯರ್ಥಿಗಳು ಒಂದು ಬಾರಿ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು ಹಾಗೂ ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.

iv) ಅರ್ಜಿ ಶುಲ್ಕದ ನಮೂನೆಯನ್ನು ಕವಿಪ್ರನಿನಿಯ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ಅರ್ಜಿ ಶುಲ್ಕವನ್ನು ಕರ್ನಾಟಕ ರಾಜ್ಯದ ಯಾವುದಾದರೂ ಇ-ಅಂಚೆ ಕಚೇರಿಯ ಮುಖಾಂತರ ಪಾವತಿಸಬೇಕಿರುತ್ತದೆ. ಅರ್ಜಿ ಶುಲ್ಕದ ಜೊತೆಗೆ ರೂ.18/-ನ್ನು ಅಂಚೆ ಕಚೇರಿಯ ಸೇವಾ ಶುಲ್ಕವಾಗಿ ಪಾವತಿಸಬೇಕಿರುತ್ತದೆ.

v) ಒಂದು ವೇಳೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

vi) ಅರ್ಜಿ ಶುಲ್ಕವನ್ನು, **ದಿನಾಂಕ: 28.03.2019** ರಿಂದ **ದಿನಾಂಕ: 29.04.2019** ರ ವರೆಗೆ ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿರುವ ಯಾವುದಾದರೂ ಗಣಕೀಕೃತ ಅಂಚೆ ಕಚೇರಿಯಲ್ಲಿನ ವ್ಯವಹಾರದ ವೇಳೆಯಲ್ಲಿ ಪಾವತಿಸುವುದು.

vii) ಅರ್ಜಿ ಶುಲ್ಕ ಪಾವತಿಯು ಖಚಿತಗೊಂಡ ನಂತರವೇ ಅರ್ಜಿದಾರರು ತಾವು ಸಲ್ಲಿಸಿದ ಅರ್ಜಿಯ ಮುದ್ರಣದ ಪ್ರತಿಗಳನ್ನು ಆನ್‌ಲೈನ್ ಮೂಲಕ ಪಡೆಯಲು ಅವಕಾಶವಿರುತ್ತದೆ.

viii) ಅಭ್ಯರ್ಥಿಗಳು ಅರ್ಜಿ ಶುಲ್ಕ ಪಾವತಿಸಿರುವ ಬಗ್ಗೆ www.karnatakapost.gov.in ನಲ್ಲಿ ಅರ್ಜಿ ಶುಲ್ಕ ಪಾವತಿಸಿದ 48 ಗಂಟೆಗಳ ನಂತರ ದೃಢಪಡಿಸಿಕೊಳ್ಳಬಹುದಾಗಿದೆ. ಪಾವತಿ ಸಂದರ್ಭದಲ್ಲಿ ಯಾವುದೇ ಸ್ಪಷ್ಟೀಕರಣಕ್ಕಾಗಿ ಅಭ್ಯರ್ಥಿಗಳು ಅಂಚೆ ಕಚೇರಿ ಸಹಾಯ ದೂರವಾಣಿ ಸಂಖ್ಯೆ: 080-22392668 ಸಂಪರ್ಕಿಸುವುದು.

ix) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಉಂಟಾದಲ್ಲಿ ಸಹಾಯವಾಣಿ ಸಂಖ್ಯೆ: 080-22211527 Ext: 3789, 3872 ಕ್ಕೆ ಕಚೇರಿ ಕೆಲಸದ ವೇಳೆಯಲ್ಲಿ (ಬೆಳಿಗ್ಗೆ 10.30 ರಿಂದ ಸಂಜೆ 5:00 ಗಂಟೆಯವರೆಗೆ) ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯುವುದು.

**ವಿಶೇಷ ಸೂಚನೆ:**

i) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ, ಅದನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೇ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ii) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

iii) ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯಲ್ಲಿ ದಾಖಲಿಸಿರುವ ವಿದ್ಯಾರ್ಹತೆ, ಹುಟ್ಟಿದ ದಿನಾಂಕ(ಎಸ್.ಎಸ್.ಎಲ್.ಸಿ ಅಂಕಪಟ್ಟಿ/ಶಾಲಾ ವರ್ಗಾವಣೆ ಪತ್ರ), ಮೀಸಲಾತಿಗಳು ಎಲ್ಲಾ ದಾಖಲೆಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಹೊಂದಿರಬೇಕು ಹಾಗೂ ಮೂಲ ದಾಖಲಾತಿ ಪರಿಶೀಲನೆ ಸಮಯದಲ್ಲಿ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳು ಹಾಗೂ ಆನ್ ಲೈನ್ ನಲ್ಲಿ ಸಲ್ಲಿಸಿ ಮುದ್ರಿಸಿಕೊಂಡಿರುವ ಅರ್ಜಿ ಹಾಗೂ ಅರ್ಜಿ ಶುಲ್ಕ ಪಾವತಿಯ ಚಲನ್ ಪ್ರತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.

**13. ಸಾಮಾನ್ಯ ಸೂಚನೆಗಳು:**

i) ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟರೆ ಅಥವಾ ಕೇಂದ್ರ ಲೋಕಸೇವಾ/ರಾಜ್ಯ ಲೋಕಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ/ಖಾಯಂ ಆಗಿ ತಡೆಹಿಡಿಯಲ್ಪಟ್ಟದ್ದರೆ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ. ಆದಾಗ್ಯೂ ನಿಗಮವು ಅಂತಹ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಅಂತಹ ಅಭ್ಯರ್ಥಿಯು ಅರ್ಹನೆಂದು ತೀರ್ಮಾನಿಸಿದಲ್ಲಿ ಮಾತ್ರ ನೇಮಕಾತಿಗೆ ಅರ್ಹನಾಗಿರುತ್ತಾನೆ.

ii) ಅರ್ಜಿಯಲ್ಲಿ ಸುಳ್ಳು ಮಾಹಿತಿಗಳನ್ನು ಒದಗಿಸಿ, ಉದ್ಯೋಗ ಪಡೆದ ಅಭ್ಯರ್ಥಿಗಳನ್ನು ಸೇವೆಯಿಂದ ವಜಾಗೊಳಿಸಲಾಗುವುದು.

iii) ಅರ್ಜಿಯಲ್ಲಿ ನೀಡುವ ಅಂಚೆ ವಿಳಾಸವು ಅಂತಿಮವಾಗಿದ್ದು, ಪತ್ರ ವ್ಯವಹಾರವನ್ನು ಅದೇ ವಿಳಾಸದೊಂದಿಗೆ ನಡೆಸಲಾಗುವುದು.

iv) ವಿಳಾಸ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

v) ಅರ್ಜಿಗಳನ್ನು 'ಆನ್ ಲೈನ್' ನಲ್ಲಿ ಭರ್ತಿ ಮಾಡುವ ಪೂರ್ವದಲ್ಲಿ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆಯೊಂದಿಗೆ ಲಭ್ಯವಿರುವ ಸೂಚನೆಗಳನ್ನು ಗಮನಿಸತಕ್ಕದ್ದು.

vi) ಅಭ್ಯರ್ಥಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಮತಲ ಮೀಸಲಾತಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಆದೇಶಗಳಲ್ಲಿನ ಮಾನದಂಡವನ್ನು ತಿಳಿದಿರತಕ್ಕದ್ದು.

vii) ಅಭ್ಯರ್ಥಿಗಳ ಅರ್ಹತೆ ಕುರಿತು ಕಂಪನಿಯ ತೀರ್ಮಾನವೇ ಅಂತಿಮವಾಗಿದ್ದು, ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರತಕ್ಕದ್ದು.

viii) ನೇಮಕಾತಿಗಾಗಿ ಯಾವುದೇ ವಿಧದ ಪ್ರಭಾವ ಬೀರಲು ಅಭ್ಯರ್ಥಿ ನಡೆಸುವ ಪ್ರಯತ್ನವು, ಅಭ್ಯರ್ಥಿಯನ್ನು ಅನರ್ಹಗೊಳಿಸುವುದು.

ix) ಅಭ್ಯರ್ಥಿಗಳು ಮೂಲ ದಾಖಲಾತಿಗಳು/ಪ್ರಮಾಣ ಪತ್ರಗಳ ಇತರೆ ಮೂಲ ದಾಖಲಾತಿಗಳನ್ನು ಸಲ್ಲಿಸಲು ಕರೆ ನೀಡಿದಾಗ, ಪರಿಶೀಲನೆಗಾಗಿ 'ದೃಢೀಕೃತ ಪ್ರತಿ' ಗಳೊಂದಿಗೆ ಹಾಜರುಪಡಿಸತಕ್ಕದ್ದು.

x) ನೇಮಕಾತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳು <u>ಉಚಿತ ವಿದ್ಯುಚ್ಛಕ್ತಿ ಸರಬರಾಜು ಸೌಲಭ್ಯಕ್ಕೆ</u> ಅರ್ಹರಾಗಿರುವುದಿಲ್ಲ.

xi) ಸರ್ಕಾರದ ಆದೇಶ ಸಂಖ್ಯೆ: ಇಎನ್ 119 ಇಇಬಿ 2015, ದಿನಾಂಕ: 23.05.2015 ರಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಕಿರಿಯ ಪವರ್‌ಮ್ಯಾನ್(ಕಿರಿಯ ಮಾರ್ಗದಾಳು) ಹುದ್ದೆಯ ನೇರ ನೇಮಕಾತಿಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮ, 1977 ರ ನಿಯಮ 9(1ಬಿ) ಯ 3ನೇ ಪರಂತುಕದನ್ವಯ ಮಹಿಳೆಯರಿಗೆ ನೀಡುವ ಸಮತಲ ಮೀಸಲಾತಿಯಿಂದ ವಿನಾಯಿತಿಯನ್ನು ನೀಡಿರುತ್ತದೆ.

## 14. <u>ನೇಮಕಾತಿಗೆ ಅನರ್ಹತೆ:</u>

i) ಅರ್ಜಿ ಸಲ್ಲಿಸುವ ದಿನಾಂಕದಂದು ಅಭ್ಯರ್ಥಿಯು ಸರ್ಕಾರಿ ಇಲಾಖೆಗಳು ಅಥವಾ ಇತರೆ ಯಾವುದೇ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅರ್ಜಿಗಳನ್ನು ಅಂತಹ ಇಲಾಖೆಯ/ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತರದೆ ಸಲ್ಲಿಸಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಸರ್ಕಾರಿ ಇಲಾಖೆ ಅಥವಾ ಇತರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಅಂತಹ ಇಲಾಖೆಯ/ಸಂಸ್ಥೆಯ ಮುಖ್ಯಸ್ಥರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

ii) ಯಾವ ಅಭ್ಯರ್ಥಿಯು ಅಪರಾಧಿಯೆಂದು ಘೋಷಿಸಲ್ಪಟ್ಟಿರುತ್ತಾನೋ ಅಥವಾ ಕೇಂದ್ರ ಲೋಕ ಸೇವಾ ಆಯೋಗದಿಂದ ಅಥವಾ ರಾಜ್ಯ ಲೋಕ ಸೇವಾ ಆಯೋಗದಿಂದ ಯಾವುದೇ ಪರೀಕ್ಷೆಯನ್ನು ಬರೆಯಲು ಅಥವಾ ಯಾವುದೇ ಹುದ್ದೆಗೆ ಆಯ್ಕೆಯಾಗಲು ತಾತ್ಕಾಲಿಕವಾಗಿ/ ಖಾಯಂ ಆಗಿ ಅಮಾನತ್ತುಗೊಂಡಿದ್ದರೆ ಅಂತಹ ಅಭ್ಯರ್ಥಿ ಅರ್ಜಿ ಸಲ್ಲಿಸಲು ಅನರ್ಹನಾಗಿರುತ್ತಾನೆ.

iii) ಅಭ್ಯರ್ಥಿಯು ಅರ್ಜಿಯಲ್ಲಿ ಸುಳ್ಳು ಮಾಹಿತಿಯನ್ನು ಒದಗಿಸಿರುವುದು ಕಂಡುಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ ಮತ್ತು ನೇಮಕವಾಗಿದ್ದಲ್ಲಿ ಸೇವೆಯಿಂದ ವಜಾಗೊಳಿಸಲಾಗುವುದು.

iv) ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ನೇಮಕಾತಿ ಅಧಿಕಾರಿಗಳ ನಿರ್ಣಯವು ಅಂತಿಮವೆಂದು ಪರಿಗಣಿಸಲಾಗುವುದು ಹಾಗೂ ಅಭ್ಯರ್ಥಿಯು ಅದಕ್ಕೆ ಬದ್ಧನಾಗಿರಬೇಕು.

## 15. <u>ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆಯ ಕೆಲಸ ಮತ್ತು ಜವಾಬ್ದಾರಿಗಳು:</u>

i) ವಿದ್ಯುತ್ ಗೋಪುರ ಹಾಗೂ ಕಂಬಗಳನ್ನು ಹತ್ತುವುದು, ವಿದ್ಯುತ್ ಕಂಬಗಳ ನೆಡುವಿಕೆ, ಗುಂಡಿಗಳ ಅಗೆಯುವಿಕೆ, ಕಂಬಗಳ ಮತ್ತು ಪೂರಕ ಸಾಮಗ್ರಿಗಳನ್ನು ಹೊರುವುದು, ಸ್ಟೇಷನ್‌ನ ಸ್ವಚ್ಛತೆ, ಕ್ಲೀನಿಂಗ್ ಯಾರ್ಡ್‌ನಲ್ಲಿರುವ ಕೇಬಲ್ ಉಪಕರಣಗಳ ಸ್ವಚ್ಛತೆ, ಟ್ರಾನ್ಸ್‌ಫಾರ್ಮರ್/ಸ್ಟೇಷನ್ ಆವರಣದಲ್ಲಿರುವ ಹುಲ್ಲುಗಳನ್ನು ಕತ್ತರಿಸುವುದು, ಜಿ.ಓ.ಎಸ್. ಕಾರ್ಯನಿರ್ವಹಣೆ, ಸೂಚನೆಯ ಮೇರೆಗೆ ಸಂಪರ್ಕ ಕಡಿತಗೊಳಿಸುವಿಕೆ, ಗ್ರೌಂಡ್ ಪಿಟ್‌ಗೆ ನೀರು ಹಾಯಿಸುವುದು, ಸ್ಟೇಷನ್‌ನ ಕಾರ್ಯನಿರ್ವಹಣೆಯ ಬಗ್ಗೆ ಪಾಳಿ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿಗಳಿಗೆ ಸಹಾಯ

ಮಾಡುವುದು, ಅವಶ್ಯವಿದ್ದಲ್ಲಿ ಸಾಮಾನ್ಯ ಭಾರದ ವಸ್ತುಗಳನ್ನು ಹೊರುವುದು, ಟಿ&ಪಿ ಸಾಮಗ್ರಿಗಳ ನಿರ್ವಹಣೆ ಅಲ್ಲದೇ ಶಾಖೆಯ ಮುಖ್ಯಸ್ಥರು ನಿಗಮದ ಹಿತದೃಷ್ಟಿಯಿಂದ ವಹಿಸುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು.

ii) ಅಗತ್ಯ ಇರುವ ಸ್ಥಳಗಳಲ್ಲಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸುವುದು.

## 16. ಕಿರಿಯ ಪವರ್ ಮ್ಯಾನ್(ಕಿರಿಯ ಮಾರ್ಗದಾಳು) ಹುದ್ದೆಯ ಕೆಲಸ ಮತ್ತು ಜವಾಬ್ದಾರಿಗಳು:

i) ವಿದ್ಯುತ್ ಕಂಬಗಳ ನೆಡುವಿಕೆ, ಗುಂಡಿಗಳ ಅಗೆಯುವಿಕೆ, ಕಂಬಗಳ ಮತ್ತು ಪೂರಕ ಸಾಮಗ್ರಿಗಳನ್ನು ಹೊರುವುದು, ಮಾರ್ಗಗಳ ತಪಾಸಣೆ, ಮಾರ್ಗಗಳ ನಿರ್ವಹಣೆಗಾಗಿ ಕಂಬಗಳನ್ನು ಹತ್ತಿ ಕಾರ್ಯನಿರ್ವಹಿಸುವುದು, ಸಾಧನ ಸಲಕರಣೆ ಮತ್ತು ಸ್ಥಾವರಗಳ ಸ್ವಚ್ಛತೆ, ಮಾರ್ಗದಾಳು/ಮಾರ್ಗಕರ್ಮಿ ರವರುಗಳು ನಿರ್ವಹಿಸುವ ಮಾರ್ಗಗಳ ನಿರ್ವಹಣೆ ಕಾರ್ಯದಲ್ಲಿ ಸಹಾಯ ಮಾಡುವುದು, ಫ್ಯೂಸ್ ಆಫ್ ಕಾಲ್ ಮತ್ತು ದೋಷಗಳನ್ನು ಕಂಡುಹಿಡಿದು ಸರಿಪಡಿಸುವುದು, ನಿರ್ವಹಣೆ, ಬ್ರೇಕ್‌ಡೌನ್ ಕಾರ್ಯಗಳಲ್ಲಿ ಹಾಜರಿದ್ದು ಸಹಾಯ ಮಾಡುವುದು ಮತ್ತು ರಿಲೇ ಟೆಸ್ಟಿಂಗ್ ವಿಭಾಗದ ಕೆಲಸ ಕಾರ್ಯಗಳಲ್ಲೂ ಸಹ ಸಹಾಯ ಮಾಡುವುದು. ಕ್ಯಾಂಪ್‌ಗಳಲ್ಲಿ ಕಾರ್ಯನಿರ್ವಹಿಸುವುದು ಹಾಗೂ ಪೂರಕ ದಾಖಲೆಗಳನ್ನು ನಿರ್ವಹಿಸುವುದು ಅಲ್ಲದೇ ಶಾಖೆಯ ಮುಖ್ಯಸ್ಥರು ಕಂಪನಿಯ ಹಿತದೃಷ್ಟಿಯಿಂದ ವಹಿಸುವ ಯಾವುದೇ ಕೆಲಸಗಳನ್ನು ನಿರ್ವಹಿಸುವುದು.

ii) ಅಗತ್ಯ ಇರುವ ಸ್ಥಳಗಳಲ್ಲಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸುವುದು.

Gopalk

**ನಿರ್ದೇಶಕರು**

**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಕವಿಪ್ರನಿನಿ, ಕಾವೇರಿ ಭವನ,**

**ಬೆಂಗಳೂರು.**